ಯುಜಿಸಿ 'ಪರಾಮರ್ಶ್' ಯೋಜನೆ

ರಾಜ್ಯದ ಒಟ್ಟು 167 ಕಾಲೇಜುಗಳು ಯೋಜನೆಗೆ ಆಯ್ಕೆಯಾಗಿವೆ. ಇವುಗಳಲ್ಲಿ ಬೆಂಗಳೂರಿನ ವಿಜ್ಞಾನ ಕಾಲೇಜು ಸೇರಿ 3 ಸರ್ಕಾರಿ ಕಾಲೇಜುಗಳಿವೆ

# ರಾಜ್ಯದ 17 ಕಾಲೇಜು ಆಯ್ಕೆ

**ಬೆಂಗಳೂರು:** ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ಆರಂಭಿಸಿರುವ 'ಪರಾಮರ್ಶ್' ಯೋಜನೆಗೆ ರಾಜ್ಯದ 17 ಕಾಲೇಜುಗಳು ಆಯ್ಕೆಯಾಗಿವೆ.

ಈ ಕಾಲೇಜುಗಳು ತಮ್ಮ ಆಯ್ಕೆಯ 5 ಕಾಲೇಜುಗಳನ್ನು 2022ರೊಳಗೆ ಕನಿಷ್ಠ 2.5 ಸಿಜಿಪಿಎ ಅಂಕದೊಂದಿಗೆ 'ನ್ಯಾಕ್' ಮಾನ್ಯತೆ ಪಡೆಯಲು ನೆರವು ನೀಡುವ ನಿಟ್ಟಿನಲ್ಲಿ ಮಾರ್ಗದರ್ಶನ ಮಾಡಬೇಕು. ಪ್ರತೀ ಕಾಲೇಜಿಗೆ ₹ 30 ಲಕ್ಷ ಧನಸಹಾಯ ನೀಡಲಾಗುತ್ತದೆ.

**ಕಾಲೇಜುಗಳು:** ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜು, ಮೌಂಟ್ ಕಾರ್ಮೆಲ್ ಕಾಲೇಜು, ಸೇಂಟ್ ಜೋಸೆಫ್ ಕಾಮರ್ಸ್ ಕಾಲೇಜು, ಸೇಂಟ್ ಜೋಸೆಫ್ ಕಾಲೇಜು, ಲಾಲ್‌ಬಾಗ್ ರಸ್ತೆ, ಇಂಡಿಯನ್ ಅಕಾಡೆಮಿ ಡಿಗ್ರಿ ಕಾಲೇಜು, ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜು, ಸೇಂಟ್ ಆಗ್ನೆಸ್ ಕಾಲೇಜು, ಉಜಿರೆ ಎಸ್‌ಡಿಎಂ ಕಾಲೇಜು, ಬಂಟ್ವಾಳ ಎಸ್‌ವಿಎಸ್ ಕಾಲೇಜು, ಧಾರವಾಡ ಜೆ.ಜಿ. ಕಾಮರ್ಸ್ ಕಾಲೇಜು, ಹುಬ್ಬಳ್ಳಿ ಪಿ.ಸಿ.ಜಬಿನ್ ಸೈನ್ಸ್ ಕಾಲೇಜು, ಬಳ್ಳಾರಿಯ ಕೊಟ್ಟೂರೇಶ್ವರ ಕಾಲೇಜು, ಜಮಖಂಡಿಯ ಬಿಡಿಯಾ ಕಾಮರ್ಸ್ ಬಿಎಚ್‌ಎಸ್, ಆರ್ಟ್ಸ್, ಟಿಜಿಪಿ ಸೈನ್ಸ್ ಕಾಲೇಜು, ಬಾಗಲಕೋಟೆ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜು, ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜು, ಚಿಕ್ಕೋಡಿಯ ಕೆಎಲ್‌ಇ ಸೊಸೈಟಿಯ ಬಸವಪ್ರಭು ಕೋರೆ ಆರ್ಟ್ಸ್, ಸೈನ್ಸ್, ಕಾಮರ್ಸ್ ಕಾಲೇಜು, ನಿಪ್ಪಾಣಿ ಕೆಎಲ್‌ಇ ಸೊಸೈಟಿಯ ಜಿಐಬಿ ಕಾಲೇಜು.

2016ರಲ್ಲಿ ನ್ಯಾಕ್ 'ಎ ಪ್ಲಸ್' ಗ್ರೇಡ್ ಪಡೆದಿದ್ದ ಹಾಗೂ ನಿರಂತರವಾಗಿ ತನ್ನ ಗುಣಮಟ್ಟವನ್ನು ಕಾಯ್ದುಕೊಂಡು ಬಂದಿರುವ ನೃಪತುಂಗ ರಸ್ತೆಯಲ್ಲಿರುವ ಸರ್ಕಾರಿ ವಿಜ್ಞಾನ ಕಾಲೇಜು ಇದೀಗ 5 ಸರ್ಕಾರಿ ಕಾಲೇಜುಗಳ ಗುಣಮಟ್ಟ ಹೆಚ್ಚಿಸಲು ಯೋಜನೆ ರೂಪಿಸಿದ್ದು, ತನ್ನನ್ನು ಹೊಸ ಪರೀಕ್ಷೆಗೆ ಒಡ್ಡಿಕೊಂಡಿದೆ.